PW-9
CW-15

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC No.30/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಕುಮಾರ ಕೆ |
| ತಂದೆಯ/ಗಂಡನ ಹೆಸರು | : | ಕರಿಬಸಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | Police head constable, Malebennuru Police station., |
| ವಾಸ ಸ್ಥಳ | : | Malebennuru |

ಪಿ.ಡಬ್ಲ್ಯೂ 9

ಸಿ.ಡಬ್ಲ್ಯೂ 15

ದಿ: 29-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ದಿಃ 01-08-2019 ರಂದು ಆ ದಿನ ಅಮವಾಸ್ಯೆ ಇದ್ದ ಪ್ರಯುಕ್ತ ಚಾಸಾ-24 ರವರು ಕರಬಸವೇಶ್ವರ ದೇವಸ್ಥಾನದ ಬಂದಬಸ್ತು ನಿಮಿತ್ಯ ನನಗೆ ಮತ್ತು ಚಾಸಾ-18 ರವರನ್ನು ನೇಮಕ ಮಾಡಿದ್ದರು. ಅದರಂತೆ ನಾವು ಅಲ್ಲಿಗೆ ಹೋಗಿ ನಮ್ಮ ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 7.45 ಗಂಟೆಗೆ ಒಬ್ಬ ಮಹಿಳೆ ತನ್ನ ಹೆಸರು ರುಕ್ಮಿಣಿ, ಆರೆಕಲ್ಲು ಹೊಸಳ್ಳಿ ಗ್ರಾಮದವರು ಅಂತ ಪರಿಚಯ ಮಾಡಿಕೊಂಡು ಈ ದಿನ ಬೆಳಿಗ್ಗೆ 7.15 ಗಂಟೆಗೆ ಕರಬಸವೇಶ್ವರ ದೇವಸ್ಥಾನದ ಮುಂದೆ ಹರಿಯುತ್ತಿರುವ ನದಿಯ ದಡದಲ್ಲಿ ಸ್ನಾನ ಮಾಡಲು ಹೋಗುತ್ತಿರುವಾಗ ಒಬ್ಬ ಮಹಿಳೆ ಹಿಂದಿನಿಂದ ನನ್ನ ಕೊರಳಲಿದ್ದ ಬಂಗಾರದ ಸರವನ್ನು ಕಿತ್ತುಕೊಂಡಳು, ನಂತರ ನಾನು ಅವಳಿಗೆ ನಾನು ನನ್ನ ಬಂಗಾರದ ಸರವನ್ನು ಕೊಡು ಅಂತ ಕೇಳಿದೆ, ಆಗ ಆ ಮಹಿಳೆ ಬಂಗಾರದ ಸರವನ್ನು ತನ್ನ ಕಾಲಿನ ಕೆಳಗೆ ಹಾಕಿಕೊಂಡು ನನ್ನ ಎಡಗೈನ ಬೆರಳುಗಳಿಗೆ ಗಾಯಪಡಿಸಿ

PW-9
CW-15

ನನ್ನನ್ನು ನದಿಯಲ್ಲಿ ನುಕಿ ಆ ಬಂಗಾರದ ಸರವನ್ನು ಕಿತ್ತುಕೊಂಡು ಹೋಗಿರುತ್ತಾಳೆ ಅಂತ ತಿಳಿಸಿದರು. ನಂತರ ನಾನು ಮತ್ತು ಚಾಸಾ-18 ರವರು ಮತ್ತು ಸದರಿ ಮಹಿಳೆಯೆಂದಿಗೆ ನದಿ ತೀರದಲ್ಲಿ ಮತ್ತು ಸುತ್ತಮುತ್ತಲಿನಲ್ಲಿ ಮತ್ತು ಆ ಮಹಿಳೆ ಕಿತ್ತುಕೊಂಡು ಹೋದ ಸ್ಥಳದಲ್ಲಿ ಹುಡುಕಾಡಿದರು ಆ ಮಹಿಳೆ ಸಿಗಲಿಲ್ಲ. ನಂತರ ನಾನು ಮತ್ತು ರುಕ್ಮಿಣಿರವರು ದೂರು ಕೊಡಲು ಕಳುಹಿಸಿಕೊಟ್ಟಿರುತ್ತೇನೆ. ನಂತರ ಚಾಸಾ-1/ರುಕ್ಮಿಣಿ/ದೂರುದಾರರು ದೂರು ನೀಡಿದ ಮೇರೆಗೆ ಪ್ರಕರಣ ದಾಖಲಾಗಿರುತ್ತದೆ. ನಂತರ ರುಕ್ಮಿಣಿರವರ ಬಂಗಾರದ ಸರವನ್ನು ಕಿತ್ತುಕೊಂಡ ಮಹಿಳೆ ಆರೋಪಿ/ಪಲ್ಲವಿ @ ನಿರ್ಮಲಾ ಗಂಡ ಚಂದ್ರಶೇಖರ, ವಾಸಃ ಹುಬ್ಬಳ್ಳಿ ಅಂತ ತಿಳಿದು ಬಂದಿರುತ್ತದೆ. ಆರೋಪಿ ಈ ದಿನ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಅಂತ ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಹೆಚ್.ಎಸ್.ವೈ., ವಕೀಲರಿಂದ ಆರೋಪಿತರ ಪರವಾಗಿ**:

2. ಅಮವಾಸ್ಯೆ ದಿನ ದೇವಸ್ಥಾನದಲ್ಲಿ ಸಾಕಷ್ಟು ಜನ ಇದ್ದೇ ಇರುತ್ತಾರೆ ಅಂದರೆ ನಿಜ. ಮಳೆ ಬಂದಿರುವುದರಿಂದ ನದಿ ತುಂಬಿತ್ತು ಅಂದರೆ ನಿಜ. ಆ ನದಿ ತುಂಬಿರುವುದರಿಂದ ಕಮಿಟಿಯವರು ಜನರಿಗೆ ಸ್ನಾನ ಮಾಡಲು ಬಿಡುವುದಿಲ್ಲ ಅಂದರೆ ಸುಳ್ಳು. ನದಿ ನೀರು ಹೆಚ್ಚಿಗೆ ಬಂದಾಗ ನದಿ ದಡಕ್ಕೆ ತಂತಿ ಹಾಕುತ್ತಾರೆ ಅಂದರೆ ಆಗ ಹಾಕುತ್ತಿರಲಿಲ್ಲ. ಉಕ್ಕಡಗಾತ್ರಿಯಲ್ಲಿ ಉಪ ಪೊಲೀಸ ಠಾಣೆ ಇರುತ್ತದೆ. ಅಲ್ಲಿ ಯಾವುದೇ ಘಟನೆ ಆದಲ್ಲಿ ಸದರಿ ಪೊಲೀಸ ಠಾಣೆಯಲ್ಲಿ ದೂರು ದಾಖಲು ಮಾಡಬಹುದು ಅಂದರೆ ಅದು ಉಪ ಠಾಣೆ ಇರುವುದರಿಂದ ಮಾಡಲು ಆಗುವುದಿಲ್ಲ. ಉಪ ಠಾಣೆಯಲ್ಲಿ ದೂರು ಪಡೆದುಕೊಳ್ಳಲು ಕಾನೂನಿನಲ್ಲಿ ಅವಕಾಶ ಇಲ್ಲದೇ ಇರುವುದರಿಂದ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ದಾಖಲು ಮಾಡಬೇಕು. ಉಪಠಾಣೆಯಲ್ಲಿ ದೂರನ್ನು ದಾಖಲಿಸಬಹುದು ಅಂದರೆ ಸುಳ್ಳು.

PW-9
CW-15

3. ಆ ದಿನ ನನಗೆ ಮತ್ತು ಚಾಸಾ-18 ರವರನ್ನು ನೇಮಕ ಮಾಡಿದ ಬಗ್ಗೆ ಡೈರಿಯಲ್ಲಿ ನಮೂದಾಗಿದೆ. ಅಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿಯವರು ಸಹ ಇರುತ್ತಾರೆ ಅಂದರೆ ನಿಜ. ಸಾಕ್ಷಿದಾರರು ಹೇಳುತ್ತಾರೆ ಆ ದಿನ ಯಾರೂ ಇರಲಿಲ್ಲ. ಸಾಕಷ್ಟು ಜನ ಸಂದಣಿ ಇರುವುದರಿಂದ ನಾವು ಮೈಕ್ ನಲ್ಲಿ ಜನರಿಗೆ ಎಚ್ಚರಿಕೆಯಿಂದ ಇರಲು ಪ್ರಚಾರ ಮಾಡುತ್ತೇವೆ ಅಂದರೆ ನಿಜ. ಎಚ್ಚರಿಕೆ ಬಗ್ಗೆ ನಾವು ಪೋಸ್ಟರ್ ಗಳನ್ನು ಸಹ ಅಂಟಿಸುತ್ತೇವೆ ಅಂದರೆ ನಿಜ. ಸಾಕಷ್ಟು ಜನರು ಇರುವುದರಿಂದ ನಾವು ಸಹ ಅಲ್ಲಿ ಅಡ್ಡಾಡುತ್ತಿದ್ದೇವು ಅಂದರೆ ನಿಜ. ದೂರುದಾರರು/ರುಕ್ಮಿಣಿ ನಮ್ಮ ಉಪ ಠಾಣೆಗೆ ಬಂದು ಏನೂ ಹೇಳಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅದೇ ದಿನ ನಾನು ಹೇಳಿಕೆಯನ್ನು ಇನ್ಸಪೆಕ್ಟರ್ ರವರ ಮುಂದೆ ಕೊಟ್ಟಿದ್ದೇನೆ. ಅದರಲ್ಲಿ ಆರೋಪಿಯ ವಿವರಣೆ ಬಗ್ಗೆ ಇಲ್ಲ ಅಂದರೆ ಆ ದಿನ ನಮಗೆ ಏನೂ ಸಿಕ್ಕಿರಲಿಲ್ಲ. ನಾನು ಮರುಹೇಳಿಕೆಯನ್ನು ಕೊಟ್ಟಿಲ್ಲ. ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ, ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

(ವೇಲಾ .ಡಿ.ಕೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.